ಅಥವಾ ಕಾಲದ ಕ್ರೈಸಿಸ್ ಆಗಿತ್ತಾ? ಅನ್ನೋದು ಒಂದು ಆಸಕ್ತಿಯ ವಿಚಾರ ಆಗಿರಬಹುದು. ನನಗೆ ಸಾಹಿತ್ಯದ ಓದುಗನಾಗಿ ಒಂದು ಕೃತಿ ಈ ಕಾಲದ್ದು, ಇವತ್ತಿನದು. ಅಕ್ಕನ ವಚನವಿರಲಿ, ಪ್ರಭುದೇವರ ವಚನವಿರಲಿ ಅದು ರೆಲೆವೆಂಟ್ ಆಗೋದು ನನ್ನ ಕಾಲಕ್ಕೆ. ಆ ಅರ್ಥದಲ್ಲಿ ಅದು ದೇಶಕಾಲಬದ್ಧವೆ. ಸಾರ್ವಕಾಲಿಕವೂ ಹೌದು. ಯಾಕೆಂದರೆ, ಅದು ನನ್ನ ಕಾಲಕ್ಕೂ ಅರ್ಥಗಳನ್ನು ಬಿಟ್ಟುಕೊಡುತ್ತದೆ. ದೇವನೂರು ಮಹಾದೇವ ಇರಲಿ, ಕುಮಾರವ್ಯಾಸ ಇರಲಿ, ಪಂಪ ಇರಲಿ, ಶಿವರಾಮ ಕಾರಂತರೇ ಇರಲಿ, ಅವರು ಯಾವ ಕಾಲದಲ್ಲಿ ನಿಂತು ಬರೀತಿದ್ದಾರೆ ಅನ್ನೋದು ನನಗಷ್ಟು ಮುಖ್ಯವೇ ಅಲ್ಲ. ಅವರ ಭಾಷೆ ಬೇರೆ ಇರಬಹುದು. ಯಾವುದೇ ಕೃತಿ ರಿಲೇಟಿವ್ ಆಗಿ ನನಗೆ ಬೇಕಾದ ಅರ್ಥಗಳನ್ನು ಬಿಟ್ಟುಕೊಡ್ತಿದೆ ಅಂತಲ್ಲ. ನನ್ನ ಕಾಲದ ಗೋಜಲಗಳನ್ನು ಅರ್ಥೈಸಲಿಕ್ಕೆ ಹೇಗೆ ನೆರವಾಗ್ತಿದೆ ಅನ್ನೋದು ಮುಖ್ಯ. ಯಾವುದೇ ಸಾಹಿತ್ಯ ಕೃತಿ ಒಂದು ಕಾಲದೊಳಗೆ ಸೃಷ್ಟಿಯಾಗಿದ್ರೂ ಕೂಡ ಕಾಲದ ಆಚೆಗೂ ರೆಲೆವೆಂಟ್ ಆಗ್ತಾ ಹೋಗ್ತದೆ. ಅದು ಪ್ರತಿ ಕಾಲಕ್ಕೂ ಅರ್ಥಗಳನ್ನು ಬಿಟ್ಟುಕೊಡ್ತಾ ಹೋಗ್ತದೆ. ಇದೇ ಅದರ ಬ್ಯೂಟಿ. ಶೇಕ್ಸ್‌ಪಿಯರ್ ನಮಗೆ ಯಾಕೆ ಬೇಕು? ವಿಕ್ಟೋರಿಯನ್ ಕಾಲದ ಅರ್ಥಗಳನ್ನು ಕೊಡುವ ಸಾಮರ್ಥ್ಯ ಅವನ ಕೃತಿಗಳಿಗೆ ಇರಬಹುದು. ಅದನ್ನ ತಗೊಂಡು ನಾನೇನ್ ಮಾಡ್ಲಿ. ಆದ್ರೆ ಹ್ಯಾಮ್ಲೆಟ್‌ನಲ್ಲಿ ಆ ಗ್ರೇವ್ ಡಿಗ್ಗರ್ಸ್ ಇದ್ದಾರಲ್ಲ, ಅವರು ನನಗೆ ಬೇರೆ ತರಹವೇ ಕಾಣಿಸ್ತಿದ್ದಾರೆ. ಶೇಕ್ಸ್‌ಪಿಯರ್ ನನಗೆ ರೆಲೆವೆಂಟ್ ಆಗೋದು ಅವನ ಕಾಲದ ಅರ್ಥಕ್ಕಾಗಿ ಅಲ್ಲ. ನನ್ನ ಕಾಲದ ಅರ್ಥಕ್ಕಾಗಿ. ನನ್ನ ಕಾಲಕ್ಕೆ ಬೇಕಾದ ಅರ್ಥದ ಎಳೆಗಳು ಅದರೊಳಗೇ ಇರ್ತಾವೆ. ಅವನ ಕಾಲಕ್ಕೆ ಇದ್ದ ಮಾರ್ಲೋ ಅಂಥವರು ಇವತ್ತು ರೆಲೆವೆಂಟ್ ಯಾಕೆ ಆಗ್ಲಿಲ್ಲ. ಯಾಕೆಂದ್ರೆ ನನ್ನ ಕಾಲಕ್ಕೆ ಅರ್ಥಗಳನ್ನು ಬಿಟ್ಟುಕೊಡ್ತಾ ಇಲ್ಲ.

**◆ ಬಂಡಾಯ ಘಟ್ಟದ ಬರಹಗಳನ್ನು ತಾತ್ವಿಕವಾಗಿ ಟೀಕಿಸಿದವರು ನೀವು. ಯಾರು ಸದ್ಯದ ರಾಜಕೀಯ ವ್ಯಾಖ್ಯಾನಗಳಿಂದ ಉದ್ದೀಪ್ತಗೊಂಡು ಸಾಹಿತ್ಯವನ್ನು ಬರೀತಾರೆ, ಅವರ ಬರಹ ಶ್ರೇಷ್ಠ ಸಾಹಿತ್ಯವಾಗುವುದಿರಲಿ, ಸಾಹಿತ್ಯ ಕೂಡ**



**ಆಗೋದಿಲ್ಲ. ಜೊತೆಗೆ ಯಾರು ತಮ್ಮ ಸಾಮಾಜಿಕ ಪ್ರಜ್ಞೆಯನ್ನು ಸಾಬೀತುಪಡಿಸುವುದಕ್ಕಾಗಿಯೇ ಬರಹವನ್ನು ಬರೀತಾರೆ, ಅವರ ಬರಹ ಕೂಡ ಸಾಹಿತ್ಯವಾಗೋದಿಲ್ಲ ಅನ್ನೋ ನಂಬಿಕೆ ನಿಮ್ಮದು. ಇದೆಲ್ಲವನ್ನು ನೀವು ಎಂಬತ್ತರ ದಶಕದಲ್ಲಿಯೇ ಹೇಳಿದ್ದು. ಇಂಥ ಮಾತುಗಳಿಗೆ ಆಗ ಯಾವ ಪ್ರತಿಕ್ರಿಯ ದೊರೆಯಿತು. ಆಮೇಲೆ ನಾನು ಗಮನಿಸಿದ್ದೇನು ಅಂತಂದ್ರೆ ದಲಿತ ಬಂಡಾಯ ಘಟ್ಟದಲ್ಲಿ ದೇವನೂರು ಮಹಾದೇವ ಅವರೊಬ್ಬರನ್ನು ಬಿಟ್ರೆ ಬೇರೆಯವರ ಬರಹವನ್ನ ನಿಮ್ಮ ವಿಮರ್ಶೆ ಒಳಗೊಳ್ಳಲಿಲ್ಲ. ಹಾಗೆ ಒಳಗೊಳ್ಳದೇ ಇರಲು ಏನು ಕಾರಣ?**

ಒಂದು ಏನಾಯ್ತುಂದ್ರೆ, ನಾನು ಬರೆದಿದ್ದನ್ನು ಬಹುತೇಕರು ನಿರ್ಲಕ್ಷ್ಯ ಮಾಡಿದ್ರು. ಎರಡನೆಯದಾಗಿ, ತುಂಬಾ ವಿಚಿತ್ರವಾದ ಪ್ರತಿಕ್ರಿಯೆಗಳು ಬಂದ್ವು. 'ತೊಡಕುಗಳು' ಅನ್ನೋ ನನ್ನ ಲೇಖನದಲ್ಲೂ ಈ ಸಮಸ್ಯೆ ಕುರಿತು ಬರೆದೆ. ನೀವು ಯಾರ ಬಗ್ಗೆ ಬರೀತಿದ್ದೀರಿ ಅವರಿಗೆ ಬೆನ್ನು ಮಾಡಿ ಬರೀತಾ ಇದ್ದೀರಾ ಅಂತ. ಅನೇಕರಿಗೆ ಕೋಪ ಬಂದುಬಿಡ್ತು.